SRI H. M. CHANNABASAPPA (Minister for Health)—

(*a*) No.

(*b*) Yes.

(*c*) Works of this kind will be taken if at least 50% of the cost of estimate is paid as contribution by the local bodies, and they have not done so in this case.

ಶ್ರೀ ಟಿ. ತಾರೇಗೌಡ.—ಸ್ವಾಮಿ, ಜತ್ತಿಯವರ ಮಂತ್ರಿಮಂಡಲದಲ್ಲಿ ಶ್ರೀ ಕೆ. ಕೆ. ಹೆಗಡೆಯವರು ಆರೋಗ್ಯ ಸಚಿವರಾಗಿದ್ದಾಗ ತಾವರೇ ಕೆರೆಯಲ್ಲಿ ಸುಮಾರು 40 ಸಾವಿರ ರೂಪಾಯಿಗಳ ಕಟ್ಟಡದ ಆಸ್ಪತ್ರೆಯನ್ನು ಮಾನ್ಯ ಆರೋಗ್ಯ ಸಚಿವರೇ ಬಂದು ಪ್ರಾರಂಭ ಮಾಡಿರುವುದು ನಿಜವೇ ?

† ಶ್ರೀ ಹೆಚ್. ಎಂ. ಚನ್ನಬಸಪ್ಪ.—ಯಾರ ಕಾಲದಲ್ಲಿಯೇ ಆಗಲೀ, ಒಂದು ಕಟ್ಟಡವನ್ನು ಸರ್ಕಾರದವರಿಗೆ ಕೊಟ್ಟಿದ್ದರು, ಅದರಲ್ಲಿ ಆಸ್ಪತ್ರೆ ನಡೆಯುತ್ತಿದೆ.

ಶ್ರೀ. ಟಿ. ತಾರೇಗೌಡ —ಸ್ವಾಮಿ, ಈ ಆಸ್ಪತ್ರೆ ಹಾಳಿ ನಡೆಯುತ್ತಿದ್ದು, ಇದರ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು 4-5 ಭಾರಿ ಜಿಲ್ಲಾ ಆರೋಗ್ಯ ಅಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸುಮಾಡಿ ಕಳುಹಿಸಿದರೂ ಇದುವರೆಗೂ ಏನು ಕ್ರಮ ಕೈಗೊಂಡಿಲ್ಲ. 1973ರಲ್ಲಿ ವಿಶೇಷವಾದ ಮಳೆ ಬಂದು ಕಟ್ಟಡ ಬಿದ್ದುಹೋಗಿರುತ್ತೆ. ಈಗ ಸರ್ಕಾರ ಗ್ರಾಮ ಪಂಚಾಯಿತಿಯನ್ನು ವಂತಿಗೆ ಕೇಳುವುದು ಧರ್ಮವೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇಲ್ಲಿ ನ್ಯಾಯ ಮತ್ತು ಧರ್ಮದ ಪ್ರಶ್ನೆ ಇಲ್ಲ. ಈ ವ್ಯವಹಾರ ನಡೆಯುವ ಕಾಲದಲ್ಲಿಯೇ ಕಟ್ಟಡ ಬಿದ್ದುಹೋಗಿದೆ ಎಲ್. ಎಫ್. ಡಿಸ್ಪೆನ್ಸರಿ ಕೊಡುವಾಗ ಅರ್ಧ ಭಾಗವನ್ನು ಸ್ಥಳೀಯ ಸಂಸ್ಥೆಗಳು ಕೊಡಬೇಕೆಂದು ಹಳೆ ಕಾನೂನಿನಲ್ಲಿ ವಿಧಾಯಕವಾಗಿದೆ ಈಗ ತಾಲ್ಲೂಕು ಬೋರ್ಡು ಮತ್ತು ಮುನಿಸಿಪಾಲಿಟಿಗಳು ನಡೆಸುವಂಥ ಆಸ್ಪತ್ರೆಗಳನ್ನು ಸರ್ಕಾರವೇ ತೆಗೆದುಕೊಳ್ಳುವ ಬಗ್ಗೆ ಪರ್ಯಾಲೋಚನೆಯಲ್ಲಿದೆ. ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ. ಆಗ ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

Construction of L.B.C. of Almatti Dam.

293. SRI M. M. SAJJAN (Muddebihal).—Will the Minister of State for Major and Medium Irrigation be pleased to state :

(*a*) whether Government has any proposal to provide funds for constructing the left bank canal of Almatti Dam of U.K P. in the first stage instead of constructing the same at the time of taking up Almatti Lift Irrigation scheme which is under the consideration of Government;

(*b*) the total amount provided by the World Bank for constructing the works of U.K.P. *viz* construction of Left Bank Canal of Narayanpur Dam and Almatti Dam during 1976-77;

(*c*) whether Government has included the amount required for constructing Left Bank Canal of Almatti Dam in the loan amount requested from the World Bank;

(*d*) the total amount required for constructing the Left Bank Canal of Almatti Dam;

(*e*) the total command area coming under irrigation from Left Bank Canal of Almatti;

SRI SUBHASH ASTURE (Minister of State for Major and Medium Irrigation)—

(*a*) Yes

Proposed to be included in Stage I U.K.P.

(*b*) Nil.

(*c*) Yes; being included.

(*d*) About Rs. 8.00 Crores.

(*e*) 50,000 acres.

ಶ್ರೀ ಎಂ. ಎಂ. ಸಜ್ಜನ್.—ಸ್ವಾಮಿ, ತಾವು ಕೊಟ್ಟ ಉತ್ತರದಲ್ಲಿ 8 ಕೋಟಿ ರೂಪಾಯಿಗಳಲ್ಲಿ 50 ಸಾವಿರ ಎಕರೆ ನೀರಾವರಿಯಾಗುತ್ತಿದೆ ಎಂದು ಹೇಳಿದ್ದೀರಿ. ಇಂಥ ಪ್ರಸಂಗದಲ್ಲಿ ಇದೇ ಕಾಲುವೆ ಕೆಲಸಕ್ಕೆ ಒಂದೇ ಹಂತದಲ್ಲಿ ಪ್ರಾಧಾನ್ಯತೆ ಕೊಟ್ಟು ಕೆಲಸ ನಡೆಸುತ್ತೀರಾ?

† ಶ್ರೀ ಸುಭಾಷ್ ಅಸ್ತೂರೆ.—ನಡೆಸೋಣ.

ಶ್ರೀ ಎಂ. ಎಂ. ಸಜ್ಜನ್.—ಸ್ವಾಮಿ, ಆಲಮಟ್ಟಿ ಯೋಜನೆಯ ಕೃಷ್ಣ ಎಡದಂತೆ ಕಾಲುವೆ ಪೂರ್ಣಗೊಂಡರೆ ಮುಧೋಳ್ ಮತ್ತು ಬಾಗೇವಾಡಿ ತಾಲ್ಲೂಕುಗಳು ಬರಗಾಲದಿಂದ ನಿವಾರಣೆ ಆಗುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಸುಭಾಷ್ ಅಸ್ತೂರೆ.—ಗೊತ್ತಿದ್ದೇ ಈ ಯೋಜನೆ ಮಾಡಿದ್ದೇವೆ.

Industrial Dispute against Jyothi Home Industries Mysore.

310. SRI M. S. KRISHNAN (Mallerwaram).—Will the Minister for Labour be pleased to state :—

(*a*) whether an Industrial Dispute was raised by Laxman Rai against Jyothi Home Industries, Mysore;

(*b*) whether the High Court had directed the Government to reconsider their earlier decision not to refer the dispute to adjudication;

(*c*) when the order of the High Court was passed;

(*d*) whether the matter is pending since more than one year ?

SRI C. N. PATIL (Minister for Labour).—

(*a*) Yes.

(*b*) Yes.

(*c*) 22-8-1975.

(*d*) The matter is not pending with Government.